ಕಾಪು ಕ್ಷೇತ್ರದ ಕಟಪಾಡಿ ಮಂಡಲ ಪಂಚಾಯಿತಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಂ ಕಚೇರಿ

೨೧೪೫. ಶ್ರೀ ವಸಂತ ವಿ. ಸಾಲಿಯಾನ್(ಕಾಪು).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾಪು ಕ್ಷೇತ್ರದ ಕಟಪಾಡಿ ಮಂಡಲಕ್ಕೆ ಒಂದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಶಾಖಾ ಕಛೇರಿಯು ಮಂಜೂರಾಗಿರುವುದು ನಿಜವೆ ;

ಆ) ಹಾಗಿದ್ದಲ್ಲಿ ಸದರಿ ಕಛೇರಿಯ ಕಟ್ಟಡವನ್ನು ಯಾವಾಗ ಪ್ರಾರಂಭ ಮಾಡಲಾಗುವುದು ?

ಶ್ರೀ ಲಕ್ಷ್ಮೀನರಸಿಂಹಯ್ಯ(ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು).—

ಅ) ನಿಜ.

ಆ) ಕಟಪಾಡಿಯ ಶಾಖಾ ಕಛೇರಿಯು ದಿನಾಂಕ ೧-೩-೧೯೮೭ರಿಂದ ಕಾರ್ಯಾರಂಭ ಮಾಡಿದೆ.

ಶ್ರೀ ವಸಂತ ವಿ. ಸಾಲಿಯಾನ್.—ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿಗೆ ಶಾಖಾ ಕಛೇರಿ ಯಾವಾಗ ಮಂಜೂರಾಗಿದ್ದು ? ಕಟಪಾಡಿಯ ಶಾಖಾ ಕಛೇರಿಯು ೧-೩-೮೭ ರಿಂದ ಆರಂಭವಾಗಿದೆ ಎಂದು ಹೇಳಿದ್ದೀರಿ. ಇದಕ್ಕೆ ಸ್ವಂತ ಕಟ್ಟಡ ಇಲ್ಲ. ಇಲಾಖಾ ವತಿಯಿಂದ ಸರ್ಕಾರ ಯಾವಾಗ ಸ್ವಂತ ಕಟ್ಟಡಕ್ಕಾಗಿ ಜಾಗ ತೆಗೆದುಕೊಂಡು ಕೆಲಸ ಪ್ರಾರಂಭ ಮಾಡುತ್ತದೆಂಬುದನ್ನು ಹೇಳಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಅಲ್ಲಿ ನಿವೇಶನ ಸಿಗದೇ ಇರುವುದರಿಂದ ಬಾಡಿಗೆ ಕಟ್ಟಡದಲ್ಲಿ ಈಗ ಕೆಲಸ ನಡೆಯುತ್ತಿದೆ. ಅಲ್ಲಿ ಜಾಗವನ್ನು ಪಡೆಯುವುದಕ್ಕೋಸ್ಕರ ವಿಶೇಷವಾದ ಪ್ರಯತ್ನ ಮಾಡಿದರೂ ಕೂಡ ಇಲ್ಲಿಯವರೆಗೆ ಸಿಕ್ಕಿಲ್ಲ. ಮಾನ್ಯ ಶಾಸಕರಿಗೆ ಈ ಸದನದಲ್ಲಿ ಬೇಡಿಕೊಳ್ಳುತ್ತೇನೆ ತಾವು ಸಹಾಯ ಮಾಡಿ ತಕ್ಷಣ ನಿವೇಶನ ಒದಗಿಸುವುದಕ್ಕೆ ಸಹಾಯ ಮಾಡಿದರೆ ಆದಷ್ಟು ಬೇಗ ಕಟ್ಟಡ ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವಸಂತ ವಿ ಸಾಲಿಯಾನ್.—ಅಧ್ಯಕ್ಷರೇ, ಈಗಾಗಲೇ ಡೆಪ್ಯೂಟಿ ಕಮಿಷನರ್‌ರವರು ಜಾಗದ ಬಗ್ಗೆ ತಹಶೀಲ್ದಾರ್‌ರವರಿಗೆ ಮನವಿ ಮಾಡಿದ್ದಾರೆ. ಈ ಮನವಿ ಮಾಡಿ ಸುಮಾರು ೨ ವರ್ಷಗಳಾಗಿವೆ. ಅಲ್ಲಿ ಜಾಗ ಇದ್ದೂ ಸಹಾ ಜಾಗ ಇಲ್ಲ ಎನ್ನುವ ರೀತಿಯಲ್ಲಿ ರೆವಿನ್ಯೂ ಇಲಾಖೆಯವರು ವರದಿಯನ್ನು ಕಳುಹಿಸಿದ್ದಾರೆ. ಅಲ್ಲಿ ಜಾಗ ಇದೆ ಸಂಬಂಧಪಟ್ಟ ಗ್ರಾಮ ಲೆಕ್ಕಿಗರೂ ಸಹಾ ಜಿಲ್ಲಾಧಿಕಾರಿಗಳಿಗೆ ವರದಿ ಕಳುಹಿಸಿದ್ದಾರೆ. ಡೆಪ್ಯುಟಿ ಕಮಿಷನರ್‌ರವರಿಂದ ಅಲ್ಲಿ ಜಾಗವನ್ನು ಮಂಜೂರು ಮಾಡಿಸಿಕೊಂಡು ಆದಷ್ಟು ಬೇಗ ಕಟ್ಟಡವನ್ನು ಕಟ್ಟಬೇಕು. ನಮ್ಮ ಗ್ರಾಮದಲ್ಲಿ ಆದಷ್ಟು ಬೇಗ ಈ ಕಛೇರಿಗೆ ಸ್ವಂತ ಕಟ್ಟಡ ಆಗಬೇಕೆಂದು ಹೇಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಸದಸ್ಯರು ದಯವಿಟ್ಟು ಜಾಗದ ವಿವರವನ್ನು ಕೊಟ್ಟರೆ ಜಾಗದ ಸಮಸ್ಯೆ ಏನಿದೆ ಎಂಬುದನ್ನು ತಿಳಿದುಕೊಂಡು ಶೀಘ್ರವಾಗಿ ಅಕ್ವೈರ್ ಮಾಡುವುದಕ್ಕೆ ವಿಶೇಷವಾದ ಕಾರ್ಯಕ್ರಮ ಹಾಕಿಕೊಳ್ಳುತ್ತೇನೆ.

ತುಮಕೂರು ಜಿಲ್ಲೆಯಲ್ಲಿ ಸರ್ಕಾರಿ ರೇಷ್ಮೆ ಫಾರಂಗಳು

೨೨೧೩. ಶ್ರೀ ಜೆ.ಎಸ್. ಶಿವಸಂಜಪ್ಪ (ಗುಬ್ಬಿ).—ಮಾನ್ಯ ಕಾನೂನು ಸಂಸದೀಯ ವ್ಯವಹಾರ ಗಳು ಮತ್ತು ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು ಜಿಲ್ಲೆ ಗುಬ್ಬಿಯಲ್ಲಿ ರೇಷ್ಮೆ ಬೆಳೆ ಜಮೀನು ವಿಸ್ತೀರ್ಣವೆಷ್ಟು ? ಆ ಪೈಕಿ ಸರ್ಕಾರದ ರೇಷ್ಮೆ ಬೆಳೆ ಬೆಳೆಯುವ ಫಾರಂಗಳು ಎಷ್ಟು ? ಒಂದೊಂದು ಫಾರಂನಲ್ಲಿ ರೇಷ್ಮೆ ಬೆಳೆಯುತ್ತಿರುವ ಹಾಗೂ ಬರುತ್ತಿರುವ ರೇಷ್ಮೆ ಉತ್ಪತ್ತಿ ಮತ್ತು ವೆಚ್ಚ ಎಷ್ಟು ? (ವಿವರ ನೀಡುವುದು).

ಅ) ಗುಬ್ಬಿ ಮತ್ತು ಮಧುಗಿರಿ ತಾಲ್ಲೂಕಿನಲ್ಲಿ ಚಾಕಿ ಸಾಕಾಣಿಕಾ ಕೇಂದ್ರಗಳಿರುವು ದೆಲ್ಲೆಲ್ಲಿ (ವಿವರ ನೀಡುವುದು).

ಹೊಸದಾಗಿ ಚಾಕಿ ಸಾಕಾಣಿಕಾ ಕೇಂದ್ರಗಳು ತೆಗೆಯಲು ಸರ್ಕಾರವು ಯೋಚಿಸುತ್ತಿದೆಯೇ.

ಹಾಗಿದ್ದಲ್ಲಿ ಕೇಂದ್ರಗಳನ್ನು ತೆರೆಯುವುದಿಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರಗಳು ಮತ್ತು ರೇಷ್ಮೆ ಸಚಿವರು).– ಅ) ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ ೩೮೦ ಎಕರೆಗಳ ವಿಸ್ತೀರ್ಣದಲ್ಲಿ ರೇಷ್ಮೆ ಬೆಳೆ ಬೆಳೆಯಲಾಗುತ್ತಿದೆ. ಒಂದು ರೇಷ್ಮೆ ಕೃಷಿ ಕ್ಷೇತ್ರ, ಹೆರೂರು ಗ್ರಾಮದಲ್ಲಿ ಇದೆ. ಈ ಕೃಷಿ ಕ್ಷೇತ್ರದಲ್ಲಿ ೮ ಎಕರೆ ಹಿಪ್ಪುನೇರಳೆ ವಿಸ್ತೀರ್ಣ ಇದ್ದು ೧೯೮೩-೮೪ರಲ್ಲಿ ಉತ್ಪತ್ತಿ ಮತ್ತು ಖರ್ಚು ಈ ರೀತಿ ಇದೆ.

ರೇಷ್ಮೆ ಬಿತ್ತನೆ ಗೂಡಿನ ಉತ್ಪಾದನೆ.— ೨.೩೮ ಲಕ್ಷ

ಖರ್ಚು ೧.೨೦ ಲಕ್ಷ ರೂ.

ಆ) ಮಧುಗಿರಿ ಮತ್ತು ಗುಬ್ಬಿ ತಾಲ್ಲೂಕುಗಳಲ್ಲಿ ಅನುಕ್ರಮವಾಗಿ ೨೩ ಮತ್ತು ೨ ಚಾಕಿ ಸಾಕಾಣಿಕೆ ಕೇಂದ್ರಗಳಿವೆ. ಈ ಚಾಕಿ ಸಾಕಾಣಿಕೆ ಕೇಂದ್ರಗಳು ಎಲ್ಲೆಲ್ಲಿ ಇವೆ ಎಂಬುದನ್ನು ಅನುಬಂಧದಲ್ಲಿ ಕೊಡಲಾಗಿದೆ.

ಹೊಸದಾಗಿ ಚಾಕಿ ಸಾಕಾಣಿಕೆ ಕೇಂದ್ರ ತೆಗೆಯುವ ಯೋಜನೆ ಇರುವುದಿಲ್ಲ.

ಉದ್ಭವಿಸುವುದಿಲ್ಲ.

ಅನುಬಂಧ

ಮಧುಗಿರಿ ತಾಲ್ಲೂಕು

೧) ಮಧುಗಿರಿ	೧೩) ಹೊಸಕೆರೆ
೨) ಮೈದನಹಳ್ಳಿ	೧೪) ಪುರವಾರ
೩) ಬಾಡೇನಹಳ್ಳಿ	೧೫) ಕೆರೆಯೂರು
೪) ಮಲ್ಲೇಪಾಯಕಹಳ್ಳಿ	೧೬) ಕೋಟಿಹಾರಲಹಳ್ಳಿ
೫) ಬ್ಯಾಲ್ಯ	೧೭) ಚನ್ನಸಾಗರ
೬) ಬಿಜವಾರ	೧೮) ಕಥಿರಾಜನಹಳ್ಳಿ
೭) ಆರ್. ಗೊಲ್ಲಹಳ್ಳಿ	೧೯) ಕಡಗತ್ತೂರು
೮) ಸಿಂಗನಹಳ್ಳಿ	೨೦) ಬೆಡಕೂರು
೯) ಚಿಕ್ಕದಳವಟ್ಟ	೨೧) ದೊಡ್ಡೇರಿ
೧೦) ತಿಂಗಳೂರು	೨೨) ಐ.ಡಿ. ಹಳ್ಳಿ
೧೧) ಸಜ್ಜೇಹೊಸಹಳ್ಳಿ	೨೩) ಕೊಡಿಗೇನಹಳ್ಳಿ
೧೨) ಗುಟ್ಟೆ	

ಗುಬ್ಬಿ ತಾಲ್ಲೂಕು

೧) ಕೆ.ಜಿ. ಟೆಂಪಲ್	೨) ಮಾವಿನಹಳ್ಳಿ

ಶ್ರೀ ಜಿ.ಎಸ್. ಶಿವನಂಜಪ್ಪ.—ಅಧ್ಯಕ್ಷರೇ, ಇವರು ಹೇರೂರು ಫಾರಂ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಗುಬ್ಬಿಯಲ್ಲಿ ಸರ್ಕಾರದ ರೇಷ್ಮೆ ಬೆಳೆ ಬೆಳೆಯುವ ಫಾರಂಗಳ ಸಂಖ್ಯೆ ಹಾಗೂ ಅವುಗಳಲ್ಲಿ ರೇಷ್ಮೆ ಬೆಳೆಯಬಹುದಾದ ಹಾಗೂ ಬರಬಹುದಾದ ರೇಷ್ಮೆ ಉತ್ಪತ್ತಿ ಮತ್ತು ಖರ್ಚು ಎಷ್ಟು ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಅಲ್ಲಿ ಬಂದ ಗೂಡನ್ನೆಲ್ಲಾ ಮಾರಾಟ ಮಾಡುವುದಿಲ್ಲ ಅಲ್ಲಿಗೆ ಬೇರೆ ರೀತಿಯ ಗೂಡೂ ಬರುತ್ತದೆ ಹಾಗೂ ಬೇರೆ ರೀತಿಯಿಂದಲೂ ಮಾರಾಟ ಮಾಡುತ್ತಾರೆ. ಮಾನ್ಯ ಮಂತ್ರಿಗಳು ಎಷ್ಟು ರೇಷ್ಮೆ

ಬಿತ್ತನೆ ಗೂಡಿನ ಉತ್ಪಾದನೆ ೨.೫೮ ಲಕ್ಷ ಹಾಗೂ ಖರ್ಚು ೧.೨೦ ಲಕ್ಷ ರೂಪಾಯಿಗಳು ಎಂದು ಹೇಳಿದ್ದಾರೆ ಅದು ಸರಿಯಾದ ಅಂಕಿ ಅಲ್ಲ. ಗುಬ್ಬಿಯ ಪಕ್ಕದಲ್ಲೇ ನಾನು ಇರುವುದರಿಂದ ನಾನು ದಿನಸವೂ ಇಲ್ಲಿನ ವಹಿವಾಟನ್ನು ನೋಡುತ್ತಿದ್ದೇನೆ. ಅದು ಹಾಳಾಗಿ ಹೋಗಿರುವ ಫಾರಂ ಅದಕ್ಕೆ ಎಲ್ಲಾ ಸೌಕರ್ಯ ಕೊಟ್ಟರೂ ಏನೂ ಪ್ರಯೋಜನ ಇಲ್ಲ ತಾವು ಕೊಟ್ಟಿರತಕ್ಕ ಉತ್ತರ ಸರಿಯಾಗಿ ಬಂದಿಲ್ಲವೆಂದು ನನ್ನ ಭಾವನೆ.

ಎರಡನೆಯದಾಗಿ ಗುಬ್ಬಿ ತಾಲ್ಲೂಕಿನಲ್ಲಿ 'ಮಿಲ್ಕ್ ಅಂಡ್ ಸಿಲ್ಕ್' ಸ್ಕೀಮ್ ಸಾಕಷ್ಟು ಒಂದು ಅಂಧೋಳನವನ್ನೇ ಪ್ರಾರಂಭ ಮಾಡಿದಿರಿ. ಆದರಲ್ಲಿ ಮಿಲ್ಕ್ ಉತ್ಪಾದನೆಯಲ್ಲಿ ಸಾಕಷ್ಟು ಸಾಧನೆ ಮಾಡಿದ್ದೀರಿ ರೇಷ್ಮೆ ಬಗ್ಗೆ ಹೇಳುವುದಾದರೆ ಗುಬ್ಬಿ ತಾಲ್ಲೂಕಿನ ಚಂದ್ರಶೇಖರಪುರ ಹೋಬಳಿಯಲ್ಲಿ ಎರಡು ಚಾಕಿ ಸಾಕಾಣಿಕೆ ಕೇಂದ್ರಗಳು ಏನು ಇವೆ ಅವುಗಳ ಸುತ್ತಮುತ್ತಲ ನಿಟ್ಟೂರು, ಕಸಬ, ಚೇಳೂರು, ಹಾಗಲವಾಡಿ ಭಾಗದಲ್ಲಿ ರೇಷ್ಮೆಯನ್ನು ಬೆಳೆಯುತ್ತಾರೆ ಅಲ್ಲಿ ಹೆಚ್ಚು ಪಂಪುಸೆಟ್ಟುಗಳು ಇದ್ದು ಈ ನೀರಿನ ಸೌಕರ್ಯದಿಂದ ರೇಷ್ಮೆಯನ್ನು ಬೆಳೆಯುತ್ತಾರೆ.
ಆದುದರಿಂದ ದಯವಿಟ್ಟು ಈ ಒಂದು ಉತ್ತರವನ್ನು ಮರು ಪರಿಶೀಲನೆ ಮಾಡುತ್ತೀರಾ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾರ್.—ಅಧ್ಯಕ್ಷರೆ, ನನಗೆ ಇಲಾಖೆಯಿಂದ ಬಂದಂಥ ಅಂಕಿ ಸಂಖ್ಯೆಗಳ ಆಧಾರದ ಮೇಲೆ ನಾನು ಮಾನ್ಯ ಸದಸ್ಯರಿಗೆ ಉತ್ತರವನ್ನು ಕೊಟ್ಟಿದ್ದೇನೆ. ಇದು ಸರಿಯಾಗಿಲ್ಲ ಎನ್ನುವುದಾದರೆ, ಸಂಬಂಧಪಟ್ಟ ವಿವರಗಳನ್ನು ಕೊಟ್ಟಿದ್ದರೆ, ಆದರಲ್ಲಿ ತಪ್ಪಿದೆ ಎಂದು ಗೊತ್ತಾದರೆ ಅದನ್ನು ಸರಿಪಡಿಸಿಕೊಂಡು ಉತ್ತರವನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ನಾನು ಈಗ ಕೊಟ್ಟ ಉತ್ತರವೇ ಸರಿಯಾಗಿದೆ ಎಂದು ಹೇಳಿದರೆ ಮಾನ್ಯ ಶಿವನಂಜಪ್ಪನವರಿಗೆ ಸಮಾಧಾನವಾಗುವುದಿಲ್ಲ. ಆದುದರಿಂದ ಈ ದಿಶೆಯಲ್ಲಿ ಅವರು ನನಗೆ ಸಹಾಯವನ್ನು ಮಾಡಿದರೆ ನಾನು ಉತ್ತರವನ್ನು ಸರಿಪಡಿಸತಕ್ಕಂಥ ಪ್ರಯತ್ನವನ್ನು ಮಾಡುತ್ತೇನೆ. ಇನ್ನು ಚಾಕಿ ಸಾಕಾಣಿಕೆ ವಿಚಾರವನ್ನು ಹೇಳಿದ್ದಾರೆ. ಅದು ಈಗ ಜಿಲ್ಲಾಪರಿಷತ್‌ನವರೆ ವ್ಯಾಪ್ತಿಗೆ ಹೋಗಿರತಕ್ಕಂಥ ವಿಚಾರ. ಆದರೂ ಕೂಡ ಅವಶ್ಯಕವಾಗಿ ಬೇಕಾದರೆ ಅದನ್ನು ತೆರೆಯಂತಕ್ಕಂಥ ಪ್ರಯತ್ನವನ್ನು ಮಾಡುತ್ತೇನೆ. ಮಾನ್ಯ ಶಿವನಂಜಪ್ಪನವರು ಆ ವಿಷಯದಲ್ಲಿ ನಿರಾಶರಾಗ ಬೇಕಾದ ಪ್ರಮೇಯವಿಲ್ಲ ಎಂದು ಹೇಳಬಯಸುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ತಾವುಗಳು ಇರುವ ತನಕ ನಾನು ನಿರಾಶನವಾಗುವುದಿಲ್ಲ. ಫಾರವರ್ ರೇಷ್ಮೆ ಉತ್ಪತ್ತಿ ಮತ್ತು ಖರ್ಚಿನ ಬಗ್ಗೆ ಹೇಳಿದ್ದೇನೆ. ಬಿತ್ತನೆ ಗೂಡಿನ ಉತ್ಪಾದನೆ ಕೇಳಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಬಿತ್ತನೆ ಕೆಲಸಕ್ಕೇ ಉಪಯೋಗಿಸುತ್ತಾರೆ ಇಷ್ಟೇ ಅದರ ಅರ್ಥ.

ಸವದತ್ತಿ ತಾಲ್ಲೂಕಿನ ಶ್ರೀ ಕ್ಷೇತ್ರ ಸೋಗಲದಲ್ಲಿ ''ಚಿಗರೆ ವನ''

೨೨೨೨. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಶ್ರೀ ಕ್ಷೇತ್ರ ಸೋಗಲದಲ್ಲಿ ಚಿಗರೆ ಬನ ಸ್ಥಾಪಿಸುವ ಬಗ್ಗೆ ಮನವಿಗಳು ಬಂದಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಅಲ್ಲಿ ಚಿಗರೆ ಬನ ಸ್ಥಾಪಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ನಿಜ.

ಆ) ಶ್ರೀ ಕ್ಷೇತ್ರ ಸೋಗಲದಲ್ಲಿ ಜಿಂಕೆ ಬನ ಸ್ಥಾಪಿಸುವ ವಿಷಯ ಅರಣ್ಯ ಇಲಾಖೆಯಂ ಪರಿಶೀಲನೆಯಲ್ಲಿದೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಅಧ್ಯಕ್ಷರೆ, ಹೋದವರ್ಷದಲ್ಲಿಯೂ ಕೂಡ ಇದೇ ಸದನದಲ್ಲಿ ಮಾನ್ಯ ಮಂತ್ರಿಯವರು 'ಜಿಂಕೆ ವನ' ಸ್ಥಾಪಿಸುವ ವಿಚಾರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ.